ವಿಷಯ:- ರಾಮನಗರ ಪಟ್ಟಣದಲ್ಲಿ ಇನ್ನೊಂದು ಪೋಲೀಸ್‌ಠಾಣೆ ಪ್ರಾರಂಭ

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ ೧೦:- (೨೭೩)
ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೦ ನೇ ಇಸವಿ ಸೆಪ್ಟಂಬರ್ ತಿಂಗಳಲ್ಲಿ ರಾಮನಗರದಲ್ಲಿ ಆದ ಕೋಮು ಗಲಭೆಯ ನಂತರ ಸಮರ್ಥವಾದ ಕಾನೂನು ಪಾಲನೆಗೋಸ್ಕರ ರಾಮನಗರ ಪಟ್ಟಣದ ಐಜೂರು ಬಡಾವಣೆಯಲ್ಲಿ ಹೊಸದಾಗಿ ಒಂದು ಪೋಲೀಸ್ ಠಾಣೆಯನ್ನು ಸ್ಥಾಪಿಸಲು ತಾತ್ಪಿಕವಾಗಿ ಒಪ್ಪಿಗೆ ನೀಡಿದ್ದುದು ನಿಜವೇ?
ಆ) ರಾಮನಗರಕ್ಕೆ ಇನ್ನೊಂದು ಪೋಲೀಸ್ ಠಾಣೆಯ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?
ಇ) ಐಜೂರು ಬಡಾವಣೆಯಲ್ಲಿ ಪೋಲೀಸ್ ಠಾಣೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

ಹೌದು.

ಐಜೂರು ಬಡಾವಣೆಯಲ್ಲಿ ಪೋಲೀಸ್ ಠಾಣೆ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಮಂಜೂರಾತಿ ನೀಡಿ ದಿನಾಂಕ. ೧೫.೨.೯೩ ರಂದು ಸರ್ಕಾರಿ ಆದೇಶ ಹೊರಡಿಸಿದೆ. ಸದ್ಯದಲ್ಲಿ ಠಾಣೆ ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ತ್ರಿವರ್ಣದ ಹೊಸ ಕಾರ್ಡುಗಳ ಹಂಚಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. ೧೧:- (೨೭೪)
ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ)
ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದೆ ಕೊಟ್ಟಿದ್ದ ಹಸಿರು ಮತ್ತು ಕೇಸರಿ ಬಣ್ಣದ ಕಾರ್ಡುಗಳಿಗೆ ಬದಲಾಗಿ ತ್ರಿವರ್ಣದ ಹೊಸ ಕಾರ್ಡುಗಳನ್ನು ಹಂಚಲು ತೀರ್ಮಾನಿಸಿದ್ದು, ಈವರೆವಿಗೆ ಅಂತಹ ಎಷ್ಟು ಕಾರ್ಡುಗಳನ್ನು ಹಂಚಲಾಗಿದೆ.
ಆ) ಹಿಂದೆ ಇದ್ದ ಕಾರ್ಡುಗಳ ಬದಲಾಗಿ ಈಗ ಎಷ್ಟು ಹೆಚ್ಚುವರಿ ಕಾರ್ಡುಗಳನ್ನು ಹಂಚಲಾಗಿದೆ?
ಇ) ಹೆಚ್ಚುವರಿಯಾದ ಕಾರ್ಡುಗಳಿಗೆ ಅಗತ್ಯವಾದಷ್ಟು ಆಹಾರ ಪದಾರ್ಥ ಮತ್ತು ಸೀಮೆಎಣ್ಣೆ ನೀಡಲಾಗುತ್ತಿದೆಯೇ?

ಶ್ರೀಮತಿ ಮನೋರಮ ಮಧ್ವರಾಜ್
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

೨೭,೨೧,೨೪೩ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ.

ಸುಮಾರು ೧೭ ಲಕ್ಷ ತ್ರಿವರ್ಣ ಪಡಿತರ ಚೀಟಿಗಳನ್ನು ಹೆಚ್ಚುವರಿಯಾಗಿ ಹಂಚಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.